# ಕರ್ನಾಟಕ ಸರ್ಕಾರ
## (ಜಲ ಸಂಪನ್ಮೂಲ ಇಲಾಖೆ)

ಸಂಖ್ಯೆ: ಜಸಅ/ಉಗ್ರಾಣ/ಗಣಕ-ಯಂ/2022

ಮುಖ್ಯ ಇಂಜಿನಿಯರ್‌ರವರ ಕಛೇರಿ,
ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,
ಆನಂದರಾವ್ ವೃತ್ತ, ಬೆಂಗಳೂರು.
ದಿನಾಂಕ: 21 NOV 2022

**:: ಟೆಂಡರ್ ಅಧಿಸೂಚನೆ ::**

ವಿಷಯ: ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ALL in One ಗಣಕಯಂತ್ರಗಳನ್ನು ಖರೀದಿಸಿ ಅಳವಡಿಸಲು ಟೆಂಡರ್ ಪ್ರಕಟಣೆ.

– – –

ಮುಖ್ಯ ಇಂಜಿನಿಯರ್‌ರವರ ಕಛೇರಿ, ಜಲಸಂಪನ್ಮೂಲ ಅಭಿವೃದ್ಧಿ ALL in One ಗಣಕಯಂತ್ರಗಳನ್ನು ಉಪಕರಣವನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆ. ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ತಯಾರಕರು ಹಾಗೂ ಸರಬರಾಜುದಾರರು ಈ ಕೆಳಗೆ ನಮೂದಿಸಿರುವ ದಿನಾಂಕದಂದು ತಮ್ಮ ಕನಿಷ್ಠ ದರವನ್ನು ಪ್ರತಿಯೊಂದು ಸಾಮಗ್ರಿಗಳಿಗೆ ನಮೂದಿಸಿ ಟೆಂಡರ್ ಸಲ್ಲಿಸತಕ್ಕದ್ದು.

ಟೆಂಡರ್ ಫಾರಂನ್ನು (ದ್ವಿಪ್ರತಿಗಳಲ್ಲಿ) ದಿನಾಂಕ: 21-11-2022 ರಿಂದ 07-12-2022 ರವರೆಗೆ ಈ ಕಛೇರಿಯಿಂದ ರೂ: 1,000/- ನಗದು ಅಥವಾ ಮುಖ್ಯ ಇಂಜಿನಿಯರ್ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರುರವರ ಹೆಸರಿನಲ್ಲಿ, ಬೆಂಗಳೂರಿನಲ್ಲಿ ಸಂದಾಯವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಿ ಖುದ್ದಾಗಿ ಪಡೆದುಕೊಳ್ಳತಕ್ಕದ್ದು. ಭರ್ತಿ ಮಾಡಿ ಮೊಹರು ಮಾಡಲಾದ ಟೆಂಡರ್‌ಗಳನ್ನು ರೂ. 50,000/-ಗಳ ಇ.ಎಂ.ಡಿ.ಯೊಂದಿಗೆ ಸ್ವೀಕರಿಸುವ ಕಡೆಯ ದಿನಾಂಕ: 08-12-2022 ಸಂಜೆ 04:00 ಗಂಟೆಯವರೆಗೆ.

ಟೆಂಡರ್‌ದಾರರು ಲಕೋಟೆಯ ಮೇಲೆ **"2022-23 ನೇ ಸಾಲಿನ ALL in One ಗಣಕಯೊಂತ್ರಗಳನ್ನು ಖರೀದಿಸಿ ಅಳವಡಿಸಲು"** ಎಂದು ನಮೂದಿಸತಕ್ಕದ್ದು.

.. 2 ..

# **ಷರತ್ತುಗಳು**

1. ನಿಗಧಿಪಡಿಸಿದ ಇ.ಎಂ.ಡಿ. ರೂ. 50,000/-ಗಳನ್ನು ಲಗತ್ತಿಸದೇ ಇರುವ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2. ಟೆಂಡರ್ ಫಾರಂನಲ್ಲಿ ನಿಗಧಿಪಡಿಸಿರುವಂತೆ ಅರ್ಹತಾ ಮಾನದಂಡಗಳಿಗೆ ಪೂರಕವಾಗಿ ಸೂಕ್ತವಾದ ದಾಖಲೆಗಳನ್ನು ಒದಗಿಸತಕ್ಕದ್ದು.
3. ಟೆಂಡರ್‌ಗಳನ್ನು ಮೊಹರು ಮಾಡಿದ ಲಕೋಟೆಗಳಲ್ಲಿ ಖುದ್ದಾಗಿ ಸಲ್ಲಿಸತಕ್ಕದ್ದು. ಅಂಚೆ ಮುಖಾಂತರ ವಿಳಂಬವಾಗಿ ಸಲ್ಲಿಸುವ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
4. ಉಪಕರಣಕ್ಕೆ ನಮೂದಿಸುವ ದರ ಎಲ್ಲಾ ರೀತಿಯ ತೆರಿಗೆಯನ್ನು ಹಾಗೂ ಸಾಗಣಿಕೆ ವೆಚ್ಚವನ್ನು ಒಳಗೊಂಡಿರಬೇಕು.
5. ಟೆಂಡರ್‌ಗಳನ್ನು ದಿನಾಂಕ: 09-12-2022 ರಂದು ಬೆಳಿಗ್ಗೆ ಸಾಯಂಕಾಲ 4:30 ಘಂಟೆಗೆ ಮುಖ್ಯ ಇಂಜಿನಿಯರ್‌ರವರ ಕಛೇರಿಯಲ್ಲಿ ತೆರೆಯಲಾಗುವುದು.
6. ಅಂಗೀಕೃತ ಟೆಂಡರ್‌ದಾರರನ್ನು/ ಬಿಡ್‌ದಾರರನ್ನು ಹೊರತು ಪಡಿಸಿ ಉಳಿದವರ ಠೇವಣಿ ಹಣವನ್ನು (ಡಿ.ಡಿ)ಯನ್ನು ಹಿಂತಿರುಗಿಸಲಾಗುವುದು.
7. ತಯಾರಕರು/ಸರಬರಾಜುದಾರರು ಕೆ.ಎಸ್.ಟಿ./ಸಿ.ಎಸ್.ಟಿ/GST ಸಂಖ್ಯೆ ಹೊಂದಿದ ಅಧಿಕೃತ ತಯಾರಕರು /ಸರಬರಾಜುದಾರರಾಗಿರಬೇಕು ಹಾಗೂ ಈ ಬಗ್ಗೆ ಅವಶ್ಯ ದಾಖಲೆಗಳನ್ನು ಟೆಂಡರ್‌ನೊಂದಿಗೆ ಸಲ್ಲಿಸಬೇಕು.
8. ಸರಬರಾಜು ಮಾಡಲಾದ ಸಾಮಗ್ರಿಗಳಲ್ಲಿ ನ್ಯೂನತೆಗಳು ಅಥವಾ ಕಂಪನಿಗಳ ನಕಲು ಮಾಡಲಾದ ಸಾಮಗ್ರಿಗಳು ಕಂಡು ಬಂದಲ್ಲಿ ಕೂಡಲೇ ಬದಲಾಯಿಸತಕ್ಕದ್ದು. ಹಾಗೂ ಅಂತಹ ಟೆಂಡರ್‌ದಾರರ ಗುತ್ತಿಗೆ ಕರಾರು ರದ್ದುಪಡಿಸಲಾಗುವುದು.
9. ನಿಗಧಿತ ಅವಧಿಯಲ್ಲಿ ಉಪಕರಣವನ್ನು ಸರಬರಾಜು ಮಾಡಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
10. ಇ.ಎಂ.ಡಿ. ಹಣವನ್ನು ಟೆಂಡರ್ ಅವಧಿ ಪೂರ್ಣಗೊಂಡ ನಂತರ ಹಿಂದಿರುಗಿಸಲಾಗುವುದು.
11. ಸರಬರಾಜು ಮಾಡುವ ಸಾಮಗ್ರಿಗಳು ಐಎಸ್‌ಐ ಗುಣಮಟ್ಟದ್ದಾಗಿರಬೇಕು.
12. ಸಾಮಗ್ರಿಗಳನ್ನು ಟೆಂಡರ್‌ದಾರರು ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡತಕ್ಕದ್ದು.

ಮುಖ್ಯ ಇಂಜಿನಿಯರ್,  
ಜ.ಸಂ.ಅ.ಸಂಸ್ಥೆ ಬೆಂಗಳೂರು.